ಸಂಯುಕ್ತ ಕರ್ನಾಟಕ

**Sunday 26th August 2018**

## R V Engineering College and IAVM organized "Vedic Mathematics" an international conference was inaugurated by Mr. James Glover director of IAVM

# ವೇದಗಣಿತದತ್ತ ಹೆಚ್ಚಿದ ಒಲವು



ಆರ್.ವಿ. ತಾಂತ್ರಿಕ ಮಹಾವಿದ್ಯಾಲಯ ಮತ್ತು ಐಎವಿಎಂ ಆಂಯೋಜಿಸಿದ್ದ 'ವೇದಗಣಿತ' ಕುರಿತ ವಿಚಾರ ಸಂಕಿರಣವನ್ನು ಐಎವಿಎಂ ಸಂಸ್ಥೆ ನಿರ್ದೇಶಕ ಜೇಮ್ಸ್ ಗ್ಲೋವರ್ ಉದ್ಘಾಟಿಸಿದರು.

**ಸಂ.ಕ ಸಮಾಚಾರ ಕೆಂಗೇರಿ**

ವಿದೇಶಿ ವಿಶ್ವವಿದ್ಯಾನಿಲಯಗಳು ವೇದಗಣಿತವನ್ನು ಆದ್ಯತೆ ವಿಷಯವನ್ನಾಗಿ ಪರಿಗಣಿಸುತ್ತಿವೆ ಎಂದು ಐಎವಿಎಂ ಸಂಸ್ಥೆ ನಿರ್ದೇಶಕ ಜೇಮ್ಸ್ ಗ್ಲೋವರ್ ಹೇಳಿದರು.

ಆರ್.ವಿ. ತಾಂತ್ರಿಕ ಮಹಾವಿದ್ಯಾಲಯ ಮತ್ತು ಇನ್‌ಸ್ಟಿಟ್ಯೂಟ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ವೇದಿಕ್ ಮ್ಯಾಥಮೆಟಿಕ್ಸ್ (ಐಎವಿಎಂ) ಆಯೋಜಿಸಿದ್ದ 'ವೇದಗಣಿತ' ಕುರಿತ ವಿಚಾರಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಭಾರತೀಯ ಶಿಕ್ಷಣ ಸಂಸ್ಥೆಗಳು ವೇದಗಣಿತ ಅಭ್ಯಾಸಕ್ಕೆ ನಿರ್ಲಕ್ಷ್ಯ ತೋರುತ್ತಿದ್ದರೇ ವಿಶ್ವದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಮತ್ತು ವಿಶ್ವವಿದ್ಯಾನಿಯಲಗಳು ಮಹತ್ವ ನೀಡಿ ಪಠ್ಯದಲ್ಲಿ ಅಳವಡಿಸಿಕೊಳ್ಳುತ್ತಿವೆ.

ಮಕ್ಕಳಿಗೆ ಬಾಲ್ಯದಲ್ಲಿಯೇ ವೇದಗಣಿತದ ಅಭ್ಯಾಸ ಮಾಡಿಸಿದ್ದರೇ ಗಣಿತ ಸುಲಲಿತವಾಗಿ ಕಲಿಯ ಬಲ್ಲರು. ಹೀಗಾಗಿ, ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ವೇದಗಣಿತ ಬೋಧನೆ ಕಡ್ಡಾಯಗೊಳಿಸಲು ಸರ್ಕಾರದ ಮೇಲೆ ಒತ್ತಡ ತರಬೇಕೆಂದರು.

ಆರ್.ವಿ. ಶಿಕ್ಷಣ ಸಂಸ್ಥೆಯ ರಿಜಿಸ್ಟ್ರಾರ್ ಸೈಯದ್ ಶಮೀರ್ ಮಾತನಾಡಿ, ಮಕ್ಕಳಿಗೆ ಕಬ್ಬಿಣದ ಕಡಲೆಯಾದ ಗಣಿತವನ್ನು ವೇದಗಳ ಮುಖಾಂತರ ಸರಳ ಮತ್ತು ಸುಲಲಿತವಾಗಿ ಕಲಿಸಬಹುದು. ನಮ್ಮ ಪೂರ್ವಿಕರು ಯಾವುದೇ ತಂತ್ರಜ್ಞಾನದ ನೆರವಿಲ್ಲದೆ ವೇದಗಣಿತದ ಸಹಾಯದಿಂದ ಹವಾಮಾನ, ಮಳೆ, ಪ್ರಕೃತಿ ವಿಕೋಪದ ಮುನ್ಸೂಚನೆಗಳನ್ನು ನಿಖರವಾಗಿ ಕಂಡುಕೊಳ್ಳುತ್ತಿದ್ದರು ಎಂದರು.

ಐಎವಿಎಂ ಸಂಸ್ಥೆ ಟ್ರಸ್ಟಿ ಸ್ವಾತಿಧವೆ, ಪ್ರಾಂಶುಪಾಲ ಡಾ.ಕೆ.ಎನ್. ಸುಬ್ರಹ್ಮಣ್ಯ, ಗಣಿತ ವಿಭಾಗದ ಮುಖ್ಯಸ್ಥೆ ಡಾ. ಶ್ರೀದೇವಿ, ಪ್ರೊ.ಎಸ್.ಜಿ. ರಾಘವೇಂದ್ರಪ್ರಸಾದ್ ಮತ್ತಿತರರಿದ್ದರು.